ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ 24.3.1995 ರಂದು ಅಲ್ಲಿನ ಆಡಳಿತ ಮಂಡಳಿ ಜೊತೆ ಒಂದು ಒಪ್ಪಂದ ಮಾಡಿಕೊಂಡಿದ್ದು, ಅದರಲ್ಲಿ ಅವರು ಹೇಳಿಕೊಂಡಿದ್ದಾರೆ. ಅವರಿಗೆ ಬರಬೇಕಾದಂಥ ಸಂಬಳದ ಬಾಕಿ ಏನಿದೆ, ಅದನ್ನೆಲ್ಲಾ ಕೊಡುತ್ತೇವೆಂದು ನಮ್ಮ ಇಲಾಖಾ ವತಿಯಿಂದ ಒಂದು ಸಂಧಾನ ನಡೆದಂಥ ಸಮಯದಲ್ಲಿ ಅವರು ಹೇಳಿದರು. ಬಾಕಿ ಹಣ ಕೊಡದಿರುವ ಸನ್ನಿವೇಶದಲ್ಲಿ ಅವರ ಮೇಲೆ ನಾವು ಮೊಕದ್ದಮೆ ಹೂಡಲು ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಮೊಕದ್ದಮೆ ಹೂಡಿದ್ದೀರೋ?

ಶ್ರೀ ಸಿ. ಗುರುನಾಥ್ : ಮೊಕದ್ದಮೆ ಹೂಡುತ್ತಿದ್ದೇವೆ.

ಅಧ್ಯಕ್ಷರು : ಎಷ್ಟು ದಿವಸದಲ್ಲಿ ಮೊಕದ್ದಮೆ ಹೂಡುತ್ತೀರಿ?

ಶ್ರೀ ಸಿ. ಗುರುನಾಥ್ : ಸ್ವಲ್ಪ ದಿವಸದಲ್ಲೇ ಮೊಕದ್ದಮೆ ಹೂಡುತ್ತೇವೆ.

ಅಧ್ಯಕ್ಷರು : ಸ್ವಲ್ಪ ದಿವಸದಲ್ಲಿ ಅಂದರೆ ಎಷ್ಟು ದಿವಸದೊಳಗೆ ಮೊಕದ್ದಮೆ ಹೂಡುತ್ತೀರಿ?

ಶ್ರೀ ಸಿ. ಗುರುನಾಥ್ : ಇದಕ್ಕೆ ಕಾನೂನಿನ ರೀತ್ಯ ಒಂದು ನೋಟೀಸನ್ನು ಮೊದಲೇ ಕೊಡಬೇಕಾಗುತ್ತದೆ.

ಅಧ್ಯಕ್ಷರು : ನೋಟೀಸನ್ನು ಎಷ್ಟು ದಿವಸ ಮೊದಲು ಕೊಡಬೇಕು?

ಶ್ರೀ ಸಿ. ಗುರುನಾಥ್ : ಒಂದು ತಿಂಗಳೊಳಗೆ ಕೊಡಬೇಕು.

ಅಧ್ಯಕ್ಷರು : ಇನ್ನೆರಡು ತಿಂಗಳೊಳಗಾಗಿ ಪ್ರಕರಣವನ್ನು ಇತ್ಯರ್ಥಗೊಳಿಸಿ

ಶ್ರೀ ಸಿ. ಗುರುನಾಥ್ : ಇತ್ಯರ್ಥಗೊಳಿಸುತ್ತೇವೆ.

ಅಧ್ಯಕ್ಷರು : ಶ್ರೀ ಆರ್. ಕೃಷ್ಣಪ್ಪನವರು ಪ್ರತಿ ಸಲವೂ ಪ್ರಶ್ನೆ ಕಳುಹಿಸಿ ಅವರ ಪ್ರಶ್ನೆ ಬಂದಂಥ ಸಮಯದಲ್ಲಿ ಅವರು ಸದನದಲ್ಲಿರದೆ ಗೈರು ಹಾಜರಾಗುತ್ತಿದ್ದಾರೆಂದು ತಿಳಿಸುತ್ತಾ ಇನ್ನು ಮುಂದೆ ಇವರ ಪ್ರಶ್ನೆಗಳನ್ನು ಸದನದ ಮುಂದೆ ತರಕೂಡದೆಂದು, ಪ್ರಶ್ನೆಗಳನ್ನು ಸ್ವೀಕರಿಸಕೂಡದೆಂದು ಅಲ್ಲದೇ ಬ್ಯಾಲೆಟ್‌ನಲ್ಲಿ ಅವರ ಪ್ರಶ್ನೆ ಬಂದರೂ ಪರಿಗಣಿಸಕೂಡದೆಂದು ಆದೇಶಿಸುತ್ತೇನೆ.

ರಾಣಿಬೆನ್ನೂರು ತಾಲ್ಲೂಕಿನ ಬಸ್ ಅಭಾವ ನಿವಾರಣೆ.

132 - ಶ್ರೀ ವಿ.ಎಸ್. ಕರ್ಜಗಿ (ರಾಣಿಬೆನ್ನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣಿಬೆನ್ನೂರು ತಾಲ್ಲೂಕಿನಲ್ಲಿ ಬಸ್ಸಿನ ಅಭಾವವಿದ್ದು ಪ್ರಯಾಣಿಕರಿಗೆ ದಿನ ನಿತ್ಯ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಹೆಚ್ಚಿನ ಬಸ್ಸುಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ.

ಆ) ರಾಣಿಬೆನ್ನೂರು ನಗರವು ದಿನೇ ದಿನೇ ಬೆಳೆಯುತ್ತಿದ್ದು ಸಿಟಿ ಬಸ್ಸುಗಳನ್ನು ರಾಣಿ ಬೆನ್ನೂರಿನಿಂದ ಕುನ್ನೂರು ಪಟ್ಟಣಕ್ಕೆ ಹಾಗೂ ರಾಣಿಬೆನ್ನೂರಿನಿಂದ ಮೂಡಬೆನ್ನರವರೆಗೆ ಮಾಡಲು ಸಾಧ್ಯವಿದೆಯೇ ಹಾಗಿದ್ದಲ್ಲಿ ಯಾವಾಗ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಇಲ್ಲ

ಶ್ರೀ ವಿ.ಎಸ್. ಕರಜಗಿ : ಮಾನ್ಯ ಅಧ್ಯಕ್ಷರೆ, ರಾಣೆಬೆನ್ನೂರು ತಾಲ್ಲೂಕು 103 ಗ್ರಾಮಗಳಿಂದ ಕೂಡಿದ್ದು, ಅತಿ ಹೆಚ್ಚಿನ ಜನಸಂಖ್ಯೆಯುಳ್ಳ ಗ್ರಾಮವಾಗಿದೆ. ಅಲ್ಲಿಗೆ ಬಸ್ಸಿನ ಸೌಕರ್ಯ ಒದಗಿಸಿದ್ದು, ಅನೇಕ ಬಸ್ಸುಗಳು ದುರಸ್ತಿಗೊಳಗಾಗಿರುತ್ತವೆ. ಇದರಿಂದ ಗ್ರಾಮೀಣ ಜನತೆಗೆ ತೊಂಬಾ ತೊಂದರೆಯಾಗಿದ್ದು, ಅಲ್ಲಿ ಹೆಚ್ಚಿನ ಬಸ್ಸುಗಳ ಓಡಾಟದ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ನಾನು ಸಾರಿಗೆ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇವೆ, ಮತ್ತೆ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಎರಡು ಸ್ಪಿನ್ನಿಂಗ್ ಮಿಲ್ಲುಗಳಿದ್ದು ಜೊತೆಗ ಬಿರ್ಲಾ ಫ್ಯಾಕ್ಟರಿಯ. ಇರುವುದರಿಂದ ಅನೇಕ ಕಾರ್ಮಿಕರು ದಿನನಿತ್ಯ ಕಾರ್ಖಾನೆಗಳಿಗೆ ಹೋಗಿಬರಲು ಅನಾನುಕೂಲವುಂಟಾಗಿರುವುದರಿಂದ ಆಯಾ ಗ್ರಾಮೀಣ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಸಿಟಿ ಬಸ್ಸುಗಳನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ರಾಣೆಬೆನ್ನೂರು ತಾಲ್ಲೂಕು ಬಹಳ ದೊಡ್ಡ ತಾಲ್ಲೂಕಾಗಿದ್ದು, ಆ ತಾಲ್ಲೂಕಿಗೆ ತನ್ನದೇ ಆದ ಸಾರಿಗೆ ಘಟಕವಿಲ್ಲದ್ದರಿಂದ ಬೇರೆ ಘಟಕಳಿಂದ ಅಲ್ಲಿಗೆ ಬಸ್ಸುಗಳ ಬರುತ್ತಿವೆ. ಬೇರೆ ಘಟಕಗಳೆಂದರೆ ಹಿರೇಕೆರೂರು ಹಾವೇರಿ ಹಾಗೂ ದಾವಣಗೆರೆ ಮೊದಲಾದ ಘಟಕಗಳಿಂದ ಸುಮಾರು 59 ಬಸ್ಸುಗಳು ಈಗಾಗಲೇ ಚಲಿಸುತ್ತಿವೆ.

ಅಧ್ಯಕ್ಷರು : ಬೀಳಗಿಯರೆ, ನೀವೇನೂ ತಪ್ಪು ತಿಳಿದುಕೊಳ್ಳಬೇಡಿ. ನಿಮ್ಮ ಬಸ್ ಇಲಾಖಾ ಬರಬರುತ್ತಾ ರೈಲ್ವೆ ಇಲಾಖೆಯಾಗುತ್ತದೆ, ನೀವು ರೈಲು ಬಿಡುತ್ತಿದ್ದೀರಿ. ನಮ್ಮ ಊರಿನಲ್ಲೂ ಕೂಡ ಇದೇ ಸಮಸ್ಯೆಯಾಗಿದೆ. ಬಸ್ ಬಿಡಿ ಎಂದು ಕೇಳಿದರೆ ರೈಲು ಏಕೆ ಬಿಡುತ್ತಿದ್ದೀರಿ?

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಅದು ಒಪ್ಪಲೇಬೇಕಾದ ವಿಚಾರ. ಇದರಲ್ಲಿ ಸರ್ಕಾರದ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ. ಅದು ಬಳುವಳಿಯಾಗಿ ಬಂದಂಥ ಅವ್ಯವಸ್ಥೆ ಅದನ್ನು ಸರಿಪಡಿಸಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಅವರೊಬ್ಬರೇ ರೈಲು ಬಿಡುತ್ತಿಲ್ಲ, ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲರೂ ಈ ಸರ್ಕಾರದಲ್ಲಿ ರೈಲು ಬಿಡುತ್ತಿದ್ದಾರೆ.

ಅಧ್ಯಕ್ಷರು : ನಮ್ಮ ಜಿಲ್ಲೆಯಲ್ಲಿ ನೀವು ಶೇಕಡ 100 ರಷ್ಟು ರಾಷ್ಟ್ರೀಕರಣ ಗೊಳಿಸಿದ್ದೀರಿ. ನನ್ನ ಊರಿಗೆ ಸುಮಾರು ಒಂದು ವರ್ಷದಿಂದ ಬಸ್ ಸೌಕರ್ಯ ಕಲ್ಪಿಸಿಲ್ಲ. ಈ ಕುರಿತು ಮೊನ್ನೆ ಬೇಸರದಿಂದ ಮಾತನಾಡಿದಾಗ ಬಸ್ ಸೌಕರ್ಯ ಕಲ್ಪಿಸಿದರು. ಟಿಂಪೋನಲ್ಲಿ ಪ್ರಯಾಣಿಕರು ಪ್ರಯಾಣಿಸಬಾರದು, ವಾಹನದ ಮೇಲೆ ಪ್ರಯಾಣಿಕರು ಹತ್ತಬಾರದು, ಖಾಸಗಿ ಬಸ್ಸುಗಳಿಗೆ ಪರವಾಗಿ ಕೊಡುವ ಹಾಗಿಲ್ಲ, ನೀವು ಬಸ್ ಸೌಕರ್ಯ ಕಲ್ಪಿಸುವ ಹಾಗಿಲ್ಲ. ಇನ್ನೂ ನಮ್ಮ ಜನರಿಗೆ ಎತ್ತಿನಗಾಡಿ ಕೊಡಬೇಕಷ್ಟೆ! ಇದು ಬಹಳ ಬೇಸರದ ವಿಚಾರ. ಇದಕ್ಕೇನಾದರೂ ಪರಿಹಾರ ಕಂಡು ಹಿಡಿದು ಪರ್ಯಾಯ ವ್ಯವಸ್ಥೆ ಏನಾದರೂ ಮಾಡಿ ಉದಾರೀಕರಣ ಮಾಡಿ.

ಶ್ರೀ ಜಿ.ಬಿ. ಶಿವಕುಮಾರ್ : ಅಧ್ಯಕ್ಷರೆ, ತಾವು ನನ್ನ ರಕ್ಷಣೆಗೆ ಬಂದಿದ್ದಕ್ಕೆ ತಮಗೆ ತುಂಬಾ ಕೃತಜ್ಞತೆಗಳು.

ಅಧ್ಯಕ್ಷರು : ನಾನೂ ನಿಮ್ಮ ಹಾಗೆಯೇ ರಕ್ಷಣೆಗೆ ಬರದೆ ಇನ್ನೇನು ಮಾಡಲಿ.

ಶ್ರೀ ಜಿ.ಬಿ. ಶಿವಕುಮಾರ್ : ಗ್ರಾಮಾಂತರ ಪ್ರದೇಶದ ವ್ಯವಸ್ಥೆ ಹೇಳತೀರದು. ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಒಂದು ಕಾಲು ವರ್ಷವಾದರೂ ಇನ್ನೂ ಗ್ರಾಮಾಂತರ ಪ್ರದೇಶಗಳಿಗೆ ಬಸ್ ಸೌಕರ್ಯ ಕಲ್ಪಿಸಿಲ್ಲ. ಗ್ರಾಮೀಣ ಜನರ ಪರಿಸ್ಥಿತಿ ತಿಳಿದುಕೊಂಡು ಸಾರಿಗೆ ಸೌಕರ್ಯ ಕಲ್ಪಿಸುವ ಬಗ್ಗೆ ಮನಸ್ಸು ಮಾಡಬೇಕು.